# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 121 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಬಿ.ಎಂ.ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 13-02-2023 |
| ಉತ್ತರಿಸುವ ಸಚಿವರು | : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಉಲ್ಲಾಳ ತಾಲ್ಲೂಕಿನ ಉಲ್ಲಾಳ ಬೀಚ್ ಪ್ರದೇಶವು "ಸಮ್ಮರ್ ಸ್ಯಾಂಡ್ಸ್" ಕಡಲತಡ ಎಂದೇ ಪ್ರಸಿದ್ಧವಾಗಿ ಪ್ರವಾಸಿಗರ ಪ್ರಮುಖ ವಿಹಾರ ತಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಹಾಗಿದ್ದಲ್ಲಿ, ಉಲ್ಲಾಳ ಬೀಚ್‌ನ್ನು ಅಭಿವೃದ್ಧಿ ಪಡಿಸಿ ಹೆಚ್ಚೆಚ್ಚು ಪ್ರವಾಸಿಗರು ಬರುವಂತಾಗಲು ಸರ್ಕಾರ ಗಮನ ಹರಿಸುವುದೇ; | ಕರ್ನಾಟಕ ಪ್ರವಾಸೋದ್ಯಮ ನೀತಿ 2020-26ರಲ್ಲಿ ಉಲ್ಲಾಳ ಬೀಚ್ ಅನ್ನು ಪ್ರವಾಸಿ ತಾಣವನ್ನಾಗಿ ಗುರುತಿಸಲಾಗಿದೆ. |
| ಇ) | ಮೂಲಸೌಕರ್ಯ ಅಭಿವೃದ್ಧಿ, ಪ್ರವಾಸಿಗರ ಅನುಕೂಲಕ್ಕಾಗಿ ಬೀದಿ ದೀಪಗಳ ವ್ಯವಸ್ಥೆ, ಉತ್ತಮ ಸಂಪರ್ಕ ರಸ್ತೆ, ವ್ಯವಸ್ಥಿತ ಶೌಚಾಲಯ, ಸ್ನಾನಗೃಹ, ಬೆಂಚುಗಳು, ಮಕ್ಕಳ ಆಟದ ವ್ಯವಸ್ಥೆ, ನೈರ್ಮಲ್ಯ, ಸುಚಿತ್ವ, ಸುರಕ್ಷತಾ ವ್ಯವಸ್ಥೆ ಇತ್ಯಾದಿ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರ ಮುಂದಾಗುವುದೇ; (ವಿವರ ನೀಡುವುದು) | ಉಲ್ಲಾಳ ಕಡಲ ತೀರದಲ್ಲಿ ಪ್ರವಾಸಿ ಮೂಲಸೌಕರ್ಯಗಳ ಅಭಿವೃದ್ಧಿ ಸಂಬಂಧ ಜನಪ್ರತಿನಿಧಿಗಳು ಹಾಗೂ ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಬಂದಲ್ಲಿ, ಆಯವ್ಯಯದಲ್ಲಿ ಇಲಾಖೆಗೆ ಒದಗಿಸುವ ಅನುದಾನ ಲಭ್ಯತೆಗನುಗುಣವಾಗಿ ಹಾಗೂ ಪ್ರವಾಸಿ ಮೂಲಭೂತ ಸೌಕರ್ಯಗಳ ಅಗತ್ಯತೆಯ ಅನುಗುಣವಾಗಿ ಪರಿಗಣಿಸುವ ಬಗ್ಗೆ ಪರಿಶೀಲಿಸಲಾಗುವುದು. |
| ಈ) | ಸರ್ಕಾರದ ಉದ್ದೇಶಿತ ಹಾಗೂ ಇಲ್ಲಿಯವರೆಗೆ ಅಳವಡಿಕೆ ಆಗಿರುವ ಯೋಜನೆಗೆ ಇರುವ ಅಂತರ, ಮುಂದೆ ಕೈಗೊಳ್ಳುವ ಕಾರ್ಯಯೋಜನೆ, ವೆಚ್ಚದ ಬಗೆಗಿನ ಸಂಪೂರ್ಣ ಮಾಹಿತಿಯನ್ನು ನೀಡುವುದು? | ರಾಜ್ಯದ ಕಡಲ ತೀರಗಳ ಅಭಿವೃದ್ಧಿ ಸಂಬಂಧ ಸಿದ್ಧಪಡಿಸಿಕೊಂಡಿರುವ ಕರ್ನಾಟಕ ಕರಾವಳಿ ವಲಯ ನಿರ್ವಹಣಾ ಯೋಜನೆಗೆ Ministry of Environment, Forest and Climate Change, IA-III (CRZ Division) ರವರ ಪತ್ರ ದಿನಾಂಕ: 02.09.2022ರಲ್ಲಿ ಅನುಮೋದನೆ ನೀಡಲಾಗಿರುತ್ತದೆ.<br>ಸದರಿ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಉಲ್ಲಾಳ ಕಡಲತೀರವೂ ಸೇರಿದಂತೆ ರಾಜ್ಯದ ಕಡಲ ತೀರಗಳನ್ನು ಆಯವ್ಯಯದಲ್ಲಿ ಇಲಾಖೆಗೆ ಒದಗಿಸುವ ಅನುದಾನ ಲಭ್ಯತೆಗನುಗುಣವಾಗಿ ಹಂತಹಂತವಾಗಿ ಅಭಿವೃದ್ಧಿಪಡಿಸಲು ಪರಿಶೀಲಿಸಲಾಗುವುದು. |

TOR 08 TDV 2023

(ಆನಂದ್ ಸಿಂಗ್)
ಪ್ರವಾಸೋದ್ಯಮ,
ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು